**ಮುಂದುವರೆದ ಪಾಟೀ ಸವಾಲು: ಆರೋಪಿತರ ಪರ ಶ್ರೀ. ಎಂ ಎಸ್ ಎಚ್ ವಕೀಲರಿಂದ:**

ಆರೋಪಿ ತನ್ನ ಸಹಿಯನ್ನು ರಾಜೇಶ್ವರಿ ಎಂದು ಮಾಡುತ್ತಾರೆ. ನಾನು ಆರೋಪಿ ಸಹಿ ಮಾಡುವುದನ್ನು ನೋಡಿರುವುದಿಲ್ಲ. ಈಗ ತೋರುತ್ತಿರುವ ನಿಪಿ-5 ರಲ್ಲಿರುವ ಸಹಿ ಆರೋಪಿಯ ಸಹಿ ಆಗಿರುವುದಿಲ್ಲ. ಆರೋಪಿಗೆ ಆ ನೋಟಿಸು ಜಾರಿಯಾಗಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿ ದುರುದ್ದೇಶದಿಂದ ಬೇರೆ ರೀತಿಯಿಂದ ಸಹಿ ಮಾಡಿ ನೋಟಿಸು ಪಡೆದುಕೊಂಡಿರಬಹುದು ಎಂದು ಸ್ವತಃ ನುಡಿಯುತ್ತಾರೆ. ನಿಪಿ-5 ರಲ್ಲಿರುವ ಸಹಿಯನ್ನು ಆರೋಪಿ ಬೇರೆ ಕಡೆ ಮಾಡಿರುವುದನ್ನು ನಾನು ನೋಡಿರುವುದಿಲ್ಲ. ನಾನು ಮತ್ತು ಅಂಚೆ ಇಲಾಖೆಯವರು ಮೀಲಾಪಿಯಾಗಿ ಆ ನೋಟಿಸನ್ನು ಬೇರೆಯವರಿಗೆ ಜಾರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ದೂರು ಮತ್ತು ಸಾಕ್ಷಿ ವಿಚಾರಣೆಯಲ್ಲಿ ಕಾನೂನುಬದ್ಧ ನೋಟಿಸು ಆರೋಪಿಗೆ ಖುದ್ದು ಜಾರಿಯಾಗಿರುತ್ತದೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನಮ್ಮ ವಕೀಲರ ಮೂಲಕ ನೀಡಲಾದ ನೋಟಿಸು ಆರೋಪಿಗೆ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

2. ಅಕ್ಕಿಆಲೂರಿನಲ್ಲಿ ನಮ್ಮ ಅಂಗಡಿ ವಿರಕ್ತಮಠ ರಸ್ತೆಯಲ್ಲಿದೆ. ನಮ್ಮ ಅಂಗಡಿಯ ಅಕ್ಕಪಕ್ಕದಲ್ಲಿ ಜನದಟ್ಟಣೆ ಇರುತ್ತದೆ ಎಂದರೆ ಸರಿ. ನಾನು ಬಂಗಾರ ಕೊಟ್ಟಾಗ ಆರೋಪಿಯೇ ನನ್ನ ಅಂಗಡಿಗೆ ಬಂದಿದ್ದರು. ಈಗ ತೋರುತ್ತಿರುವ ರಶೀದಿ ನಮ್ಮ ಅಂಗಡಿಯಿಂದ ಆರೋಪಿಯ ಗಂಡ ವೀರಭದ್ರಗೌಡ ಮತ್ತಿಹಳ್ಳಿ ಅವರಿಗೆ ನೀಡಲಾದ (ಎರಡು ಪುಟಗಳು) ರಶೀದಿಯಾಗಿರುತ್ತದೆ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಅದು ಕಾಲುಸುತ್ತು, ಲಕ್ಷ್ಮೀ ಓಲೆ, ಮಾಂಗಲ್ಯಚೈನ, ಹವಳದ ಉಂಗುರಗಳಿಗೆ ಸಂಬಂಧಿಸಿದ ರಶೀದಿಯಾಗಿರುತ್ತದೆ. ಆರೋಪಿ ಸಹ ಈ ಮೇಲೆ ಹೇಳಲಾದ ಒಡವೆಗಳನ್ನು ಹೊರತುಪಡಿಸಿ ಬೇರೆ ಒಡವೆಗಳನ್ನು ಸಹ ಮಾಡಿಸಿಕೊಂಡಿರುತ್ತಾರೆ. ಈ ಮೇಲೆ ಹೇಳಲಾದ ಎಲ್ಲಾ ಆಭರಣಗಳು ಹೆಣ್ಣು ಮಕ್ಕಳು ಧರಿಸುವ ಆಭರಣಗಳಾಗಿರುತ್ತವೆ. ಆ ಬಿಲ್ಲುಗಳನ್ನು ನಮ್ಮ ಅಂಗಡಿಯ ಲೆಟರ್ ಹೆಡ್ ಮೂಲಕ ನೀಡಲು ಯಾವುದೇ ತೊಂದರೆ ಇರಲಿಲ್ಲ. ಆ ರಶೀದಿಯ ಮೇಲೆ ನಮ್ಮ ಅಂಗಡಿಯ ಶೀಲು ಮಾತ್ರ ಹಾಕಿಕೊಂಡಿರುತ್ತೇನೆ

3. ದಿಃ 20.03.2020 ರಂದು ಆ ರಶೀದಿಯನ್ನು ನೀಡಿರುತ್ತೇನೆ. ಈಗ ತೋರುತ್ತಿರುವ ಮತ್ತೊಂದು ರಶೀದಿ ನಮ್ಮ ಅಂಗಡಿಯಿಂದ ಆರೋಪಿಯ ಗಂಡನ ಹೆಸರಿಗೆ ನೀಡಲಾದ ರಶೀದಿಯಾಗಿರುತ್ತದೆ. ಅದನ್ನು ನಿಡಿ-3 ಎಂದು ಗುರುತಿಸಲಾಯಿತು.

ನಿಡಿ-2 ರಂತಹ ರಶೀದಿಯಲ್ಲಿ ರೂ.4,23,444/- ಇದ್ದು ಆ ಹಣವನ್ನು ಸಂಪೂರ್ಣವಾಗಿ ಪಾವತಿ ಮಾಡಿರುತ್ತಾರೆ. ಆ ನಿಡಿ-2 ರ ಮೇಲಿರುವ ಸಹಿ ನನ್ನದಾಗಿರುತ್ತದೆ. ನಾನು ಆರೋಪಿಗೆ ಒಡವೆ ಕೊಟ್ಟ ಬಗ್ಗೆ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆರೋಪಿ ಸಹ 2021 ನೇ ಸಾಲಿನಲ್ಲಿ ನನ್ನ ಅಂಗಡಿಯಿಂದ ಒಡವೆಗಳನ್ನು ಖರೀದಿಸಿರುತ್ತಾರೆ. ನಿಡಿ-2 ಮತ್ತು 3 ರಲ್ಲಿ ನಮೂದಿಸಲಾದ ಹಣವನ್ನು ಆರೋಪಿಯ ಗಂಡ ಸಂಪೂರ್ಣವಾಗಿ ನೀಡಿರುತ್ತಾರೆ. ನಿಡಿ-2 ಮತ್ತು 3 ರಲ್ಲಿರುವ ಬರವಣಿಗೆಯನ್ನು ನಾನೇ ಬರೆದಿರುತ್ತೇನೆ.

4. 2021 ನೇ ಸಾಲಿನಲ್ಲಿ ಕೊರೋನಾ ಪ್ರಯುಕ್ತ ಲಾಕಡೌನ ಇತ್ತು ಎಂದರೆ ಸರಿಯಲ್ಲ ಸಾಕ್ಷಿಯ 4 ತಿಂಗಳು ಮಾತ್ರ ಇತ್ತು ಆನಂತರ ಇರಲಿಲ್ಲ ಎಂದು ಸ್ವತಃ ನುಡಿಯುತ್ತಾರೆ. ನಾನು ಆರೋಪಿಗೆ ಒಡವೆಗಳನ್ನು ಕೊಟ್ಟ ಸಂದರ್ಭದಲ್ಲಿ ಲಾಕಡೌನ ಇತ್ತು ಎಂದರೆ ಸರಿಯಲ್ಲ. ನಾನು ಆರೋಪಿಗೆ ಬಂಗಾರ ಕೊಟ್ಟೆನು ಎನ್ನುವ ಸಂದರ್ಭದಲ್ಲಿ ಲಾಕಡೌನ ಇದ್ದ ಕಾರಣ ಅಂಗಡಿಯನ್ನು ತೆಗೆದಿರಲಿಲ್ಲ ಅಲ್ಲದೇ ನಾನು ಆರೋಪಿಗೆ ಬಂಗಾರವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಒಡವೆಗಳನ್ನು ಕೊಟ್ಟಿಲ್ಲ ಮತ್ತು ಈ ಬಗ್ಗೆ ಬಿಲ್ಲನ್ನು ಸಹ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಒಡವೆಗಳನ್ನು ಕೊಡುವುದಕ್ಕಿಂತ ಮೊದಲು ಎರಡು ಚೆಕ್ ಗಳನ್ನು ಆರೋಪಿ ಗಂಡನ ಕಡೆಯಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ಹಣವನ್ನು ಆರೋಪಿಯ ಗಂಡ ಸಂಪೂರ್ಣವಾಗಿ ವಾಪಾಸ್ಸು ಕೊಟ್ಟಿದ್ದರೂ ಸಹ ಭದ್ರತೆಗಾಗಿ ಪಡೆದ ಎರಡು ಚೆಕ್ ಗಳನ್ನು ವಾಪಾಸ್ಸು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಪಡೆದ ಚೆಕ್ ನ ಮೇಲೆ ಆರೋಪಿ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಯಾವುದೇ ಒಡವೆ ಖರೀದಿಸಿರುವುದಿಲ್ಲ ಮತ್ತು ಆರೋಪಿ ನನಗೆ ಯಾವುದೇ ಚೆಕ್ ನೀಡದೇ ಇದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಆಕೆಯ ಗಂಡ ನನ್ನ ಜೊತೆ ಯಾವುದೇ ಬೇರೆ ಬೇರೆ ರೀತಿಯಲ್ಲಿ ಚಿನ್ನದ ಆಭರಣಗಳ ವ್ಯವಹಾರ ಮಾಡದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ನಮೂದಿಸಲಾದ ಒಡವೆಗಳೇ ಆರೋಪಿ ನಮ್ಮ ಅಂಗಡಿಯಿಂದ ಪಡೆದುಕೊಂಡ ಒಡವೆಗಳಾಗಿರುತ್ತವೆ ಎಂದರೆ ಸರಿಯಲ್ಲ.

5. ಆ ಚೆಕ್ ನ ಮೇಲೆ ಆರೋಪಿ ಇಂಗ್ಲೀಷನಲ್ಲಿ ಬರೆದಿದುದ ಕೆಳಭಾಗದಲ್ಲಿ ರಾಜೇಶ್ವರಿ ಎಂದು ಕನ್ನಡದಲ್ಲಿ ಸಹಿ ಮಾಡಿರುತ್ತಾರೆ. ಆ ಚೆಕ್ ನ ಮೇಲಿರುವ ಬರವಣಿಗೆ

ಮತ್ತು ಸಹಿಯನ್ನು ಆರೋಪಿಯೇ ಬರೆದುಕೊಂಡು ಬಂದು ನನಗೆ ನೀಡಿದರು ಆದರೆ ನನ್ನ ಸಮಕ್ಷಮ ಬರೆದಿರುವುದಿಲ್ಲ ಮತ್ತು ಸಹಿ ಮಾಡಿರುವುದಿಲ್ಲ. ನಾನು 2020 ರಂದು ಪಡೆದ ಚೆಕ್ಕನ್ನು ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಗೆ ಹಾಜರುಪಡಿಸಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನೀಡದ ಚೆಕ್ ನ್ನು ತಕ್ಷಣ ಹಾಜರುಪಡಿಸದೇ ಇತ್ತೀಚೆಗೆ ಹಾಜರುಪಡಿಸಿ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆ ಒಡವೆಗಳ ಭದ್ರತೆಗಾಗಿ 004 ಮತ್ತು 005 ರ ಚೆಕ್ ಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಲಾದ ಎರಡು ಚೆಕ್‌ಗಳನ್ನು ಪಡೆದುಕೊಂಡಿರುವುದಾಗಿ ನಾನೇ ಆರೋಪಿಗೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ನಾನು ಆ ಒಡವೆಗಳ ಹಣದ ಭದ್ರತೆಗಾಗಿ 004 ಮತ್ತು 005 ನ್ನು ಪಡೆದುಕೊಂಡಿದ್ದೇನೆ ಎಂದು ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

6. ದಿಃ 02.05.2020 ರಂದು ಆ ಎರಡು ಖಾಲಿ ಚೆಕ್ ಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-2 ರ ದಾಖಲೆಯನ್ನು ಅಕ್ಷರಗಳ ಪರಿಶೀಲನೆಗಾಗಿ ತಜ್ಞರ ಅಭಿಪ್ರಾಯ ಕೋರಿ ಕಳುಹಿಸಿ ಕೊಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಬಂಗಾರ ನೀಡುವ ಸಂದರ್ಭದಲ್ಲಿ ಪಡೆದುಕೊಂಡು ಆ ಎರಡು ಚೆಕ್ ಗಳನ್ನು ಇತ್ತೀಚೆಗೆ ಹಾಜರುಪಡಿಸಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ವೀರಭದ್ರಗೌಡ ನನಗೆ ಯಾವುದೇ ಚೆಕ್ ಗಳನ್ನು ನೀಡಿರುವುದಿಲ್ಲ. ನಿಡಿ-2 ರಲ್ಲಿ ಹೇಳಲಾದ ಎರಡು ಚೆಕ್ ಗಳನ್ನು ಆರೋಪಿಯ ಗಂಡ ಆರೋಪಿಗೆ ಸಂಬಂಧಿಸಿದ ಚೆಕ್ ಗಳನ್ನು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ